ಪಿಡಬ್ಲೂ-1

ದಿಃ 15/01/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.
ಪಾಟೀ ಸವಾಲು ಶ್ರೀ. ಎ ಸಿ ಕೆ ವಕೀಲರಿಂದಃ

ಸಾಕ್ಷಿಗೆ ಮರಾಠಿ ಭಾಷೆ ಬಿಟ್ಟು ಬೇರೆ ಭಾಷೆ ಬರದ ಕಾರಣ ಶ್ರೀಮತಿ ಎಸ್ ಎಸ್ ಎ ವಕೀಲರನ್ನು ಭಾಷಾ ತರ್ಜುಮೆದಾರರನ್ನಾಗಿ ನೇಮಕ ಮಾಡಿಕೊಂಡು ಅವರಿಗೂ ಸಹ ಪ್ರಮಾಣ ವಚನ ಬೋದಿಸಲಾಯಿತು.

ದಾವೆ ದಾಖಲು ಮಾಡುವ 25 ವರ್ಷಗಳ ಮೊದಲು ನನ್ನ ಮದುವೆ ಆಗಿದೆ ಎಂದರೆ ಸರಿ. ಕಾಗಲನ ರಾಜೇಂದ್ರ ಡೊಂಗಲೆ ಎಂಬುವವರ ಜೊತೆ ಮದುವೆ ಆಗಿದೆ ಎಂದರೆ ಸರಿ. ಮದುವೆ ಆದಾಗಿನಿಂದ ಕಾಗಲನಲ್ಲಿ ವಾಸವಾಗಿದ್ದೇನೆಂದರೆ ಸರಿ. ಕಾಗಲನಲ್ಲಿ ನನ್ನ ಗಂಡನ ಮನೆಯವರ ಆಸ್ತಿಗಳು ಇವೆ ಎಂದರೆ ಸರಿ. ಕಾಗಲನಲ್ಲಿ ಗಂಡನ ಮನೆ ಇದೆ ಮತ್ತು ಮತ್ತಿಹೊಳ್ಳಿಯಲ್ಲಿ ಜಮೀನುಗಳು ಇವೆ. ನನ್ನ ಗಂಡ ವ್ಯವಸಾಯ ಮಾಡುತ್ತಾ ಸಹಕಾರಿ ಸಂಘದಲ್ಲಿ ಪಿಗ್ಮಿ ಕಲೆಕ್ಟ ಮಾಡುತ್ತಾರೆ. ಸದರಿ ಆದಾಯದಿಂದ ನಮ್ಮ ಮನೆ ನಡೆಯುತ್ತದೆ ಎಂದರೆ ಸರಿ. 3 ನೇ ಪ್ರತಿವಾದಿಯ ಮದವೆ ದಾವೆ ಹಾಕುವ 36 ವರ್ಷ ಮೊದಲು ಆಗಿದೆ ಎಂದರೆ ಸರಿ. ಅವರು 36 ವರ್ಷಗಳಿಂದ ಗಂಡನ ಮನೆಯಲ್ಲಿ ವಾಸವಾಗಿದ್ದಾರೆಂದರೆ ಸರಿ. ಅವರು ಕಾಗಲ ತಾಲೂಕು ಗೊರಂಬೆಯಲ್ಲಿ ವಾಸವಾಗಿದ್ದಾರೆಂದರೆ ಸರಿ. ಸರ್ಜಿರಾವ ಶ್ರೀಪತಿ ದಾವಣೆ ಎಂಬುವವರು ಜೊತೆ ಮದುವೆ ಆಗಿದೆ ಎಂದರೆ ಸರಿ. ಅವರ ಗಂಡನ ಮನೆಯಲ್ಲಿ ಅವರು ಜಮೀನುಗಳು ಇವೆ ಎಂದರೆ ಸರಿ. ಅವಳ ಗಂಡನ ಆದಾಯದಿಂದ ಅವರ ಮನೆ ನಡೆಯುತ್ತದೆ ಎಂದರೆ ಸರಿ. ನಾನು ಎಸ್ ಎಸ್ ಎಲ್ ಸಿ ವರೆಗೂ ಓದಿರುತ್ತೇನೆ. ನನ್ನ ತಂದೆ ತಾಯಿ ಹಾಗೂ ಪ್ರತಿವಾದಿ 1 ಮತ್ತು 4 ರವರು ನನ್ನ ಹಾಗೂ 3ನೇ ಪ್ರತಿವಾದಿಯ ಮದುವೆಗೆ ಸುಮಾರು 50, 50 ಸಾವಿರ ಖರ್ಚು



ಪಿಡಬ್ಲೂ-1

ಮಾಡಿದ್ದಾರೆಂದರೆ ಸಾಕ್ಷಿಯು ನನ್ನ ಮದುವೆಗೆ 40 ಸಾವಿರ ಮಾಡಿದ್ದಾರೆ ಮತ್ತು 3ನೇ ಪ್ರತಿವಾದಿ ಮದುವೆಗೆ ಎಷ್ಟು ಖರ್ಚು ಮಾಡಿದ್ದಾರೆಂದು ಗೊತ್ತಿಲ್ಲ ಎಂದು ಹೇಳುತ್ತಾರೆ.

ದಾವಾ ಸರ್ವೆ ನಂಬರ 19 5 ಎಕರೆ 19 ಗುಂಟೆ ಆಸ್ತಿಯನ್ನು ನನ್ನ ತಂದೆಗೆ ಚಿಕ್ಕೋಡಿ ಭೂ ನ್ಯಾಯ ಮಂಡಳಿಯವರು ನೀಡಿದ್ದಾರೆಂದರೆ ಗೊತ್ತಿಲ್ಲ. ಸರ್ವೆ ನಂಬರ 70/32 1 ಎಕರೆ ಜಮೀನನ್ನು ನನ್ನ ತಂದೆ ಕ್ರಯಕ್ಕೇ ಪಡೆದಿದ್ದಾರೆಂದರೆ ಸರಿ .

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು,ಚಿಕ್ಕೋಡಿ

(ಸಾಕ್ಷಿಗೆ ಕನ್ನಡದಲ್ಲಿ ಕೇಳಿದ ಪ್ರಶ್ನೇಗಳನ್ನು ಮರಾಠಿ ಭಾಷೆಯಲ್ಲಿ ತರ್ಜುಮೆ ಮಾಡಿ ಹೇಳಿ, ಸಾಕ್ಷಿ ಮಾರಾಠಿ ಭಾಷೆಯಲ್ಲಿ ನೀಡಿದ ಉತ್ತರವನ್ನು ಯಥವತ್ತಾಗಿ ಕನ್ನಡ ಭಾಷೆಗೆ ತರ್ಜುವೆ ಮಾಡಿರುವುದಾಗಿ ಈ ಮೂಲಕ ದೃಡಿಕರಿಸುತ್ತೇನೆ)

ಮಾನ್ಯ ತರ್ಜುಮೆದಾರರ ವಕೀಲರ ಸಹಿ